1584 (1832) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ (ಬ್ರಹ್ಮಾವರ) – ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸುವರ್ಣ ಗ್ರಾಮೋದಯ ಯೋಜನೆಯಡಿ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಎಷ್ಟು ಗ್ರಾಮಗಳನ್ನು ಆಯ್ಕೆ ಮಾಡಲಾಗುವುದು ಮತ್ತು ಆಯ್ಕೆಯ ಮಾನದಂಡವೇನು,

ಆ) ಈ ರೀತಿ ಆಯ್ಕೆಗೊಂಡ ಗ್ರಾಮಗಳಿಗೆ ಸರಾಸರಿ ಎಷ್ಟು ಅನುದಾನವನ್ನು ಒದಗಿಸಲಾಗುವುದು,

ಇ) ಆಯ್ಕೆಗೊಂಡ ಗ್ರಾಮಗಳ ಅಭಿವೃದ್ಧಿಯ ಯೋಜನೆಯನ್ನು ಜಾರಿಗೆ ತರುವ ಸಂಸ್ಥೆಗಳು ಯಾವುವು (ವಿವರ ನೀಡುವುದು)?

ಶ್ರೀ ಸಿ ಎಂ ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂ ರಾಜ್ ಸಚಿವರು)

ಅ) ಆಯ್ಕೆಯನ್ನು ತಾಲ್ಲೂಕುವಾರು ಮಾಡಲಾಗುವುದು ಆ ತಾಲ್ಲೂಕಿನಲ್ಲಿ ವ್ಯಾಪಿಸಿರುವ ಮತಕ್ಷೇತ್ರವನ್ನು ಗಣನೆಗೆ ತೆಗೆದುಕೊಂಡು ತಾಲ್ಲೂಕಿಗೆ ನಿಗದಿಪಡಿಸಿದ ಜನಸಂಖ್ಯೆ ಮಿತಿಯೊಳಗೆ ಗ್ರಾಮಗಳ ಆಯ್ಕೆಯನ್ನು ಅಂತಿಮಗೊಳಿಸಲಾಗುತ್ತದೆ

ಪ್ರತಿ ವ್ಯಕ್ತಿಗೆ ರೂ 2500 ರಿಂದ 3000 ದವರೆಗೆ ಅಂದಾಜಿನ ಹೆಚ್ಚುವರಿ ಅಭಿವೃದ್ಧಿ ಅನುದಾನ ಒದಗಿಸುವ ಉದ್ದೇಶವನ್ನು ಹೊಂದಿ, ರಾಜ್ಯದ ಒಟ್ಟು ಗ್ರಾಮೀಣ ಜನಸಂಖ್ಯೆಯನ್ನು ಆಧಾರವಾಗಿಟ್ಟುಕೊಂಡು, ಆಯಾ ತಾಲ್ಲೂಕಿನ ಗ್ರಾಮೀಣ ಜನಸಂಖ್ಯೆಗನುಗುಣವಾಗಿ ಹಾಗೂ ಡಾ॥ ಡಿ ಎಂ ನಂಜುಂಡಪ್ಪ ನವರ ಸಮಿತಿಯ ವರದಿಯಲ್ಲಿ ವರ್ಗೀಕರಿಸಿದ ಅತ್ಯಂತ ಹಿಂದುಳಿದ, ಹೆಚ್ಚು ಹಿಂದುಳಿದ, ಹಿಂದುಳಿದ ಮತ್ತು ತುಲನಾತ್ಮಕವಾಗಿ ಮುಂದುವರಿದ ತಾಲ್ಲೂಕುಗಳಿಗೆ ಅನುದಾನ ಹಂಚಿಕೆಯಲ್ಲಿ ಕ್ರಮವಾಗಿ 115, 110, 105 ಮತ್ತು 100 ವೇಟೇಜ್ ನೀಡಿ ತಾಲ್ಲೂಕಿನ ಜನಸಂಖ್ಯೆಯನ್ನು ನಿಗದಿಪಡಿಸಲಾಗಿದೆ ಈ ರೀತಿ ನಿಗದಿಪಡಿಸಿದ ಜನಸಂಖ್ಯೆಗೊಳಪಟ್ಟು ಸಾಮಾನ್ಯವಾಗಿ 2000 ರಿಂದ 8000 ಜನಸಂಖ್ಯೆಯಿರುವ ಗ್ರಾಮಗಳನ್ನು ಆಯ್ಕೆ ಮಾಡಲಾಗಿದೆ

ಆ) ಮೇಲಿನ (ಆ) ನಲ್ಲಿ ತಿಳಿಸಿರುವ ಮಾನದಂಡದಂತೆ ಪ್ರತಿ ತಾಲ್ಲೂಕಿಗೆ ಜನಸಂಖ್ಯೆ ಹಾಗೂ ಅನುಗುಣವಾದ ಅನುದಾನವನ್ನು ನಿಗದಿಪಡಿಸಲಾಗಿದೆ ಈ ರೀತಿ ನಿಗದಿಪಡಿಸಲಾಗಿದೆ ಈ ರೀತಿ ನಿಗದಿಪಡಿಸಿದ ಅನುದಾನವನ್ನು ಗ್ರಾಮಗಳ ಅಭಿವೃದ್ದಿ ಯೋಜನೆಗಳನ್ನು ರೂಪಿಸಿ ಅಗತ್ಯ ಅನುದಾನವನ್ನು ಆಯಾ ಗ್ರಾಮಗಳಿಗೆ ಬಿಡುಗಡೆ ಮಾಡಲಾಗುವುದು

ಇ) ಎಲ್ಲಾ ಅಭಿವೃದ್ಧಿ ಕಾರ್ಯಗಳನ್ನು ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಮತ್ತು ಗ್ರಾಮ ಪಂಚಾಯತ್‌ಗಳ ಮೂಲಕ ಆಯಾ ಇಲಾಖೆಗಳಿಂದ ಅನುಷ್ಠಾನಗೊಳಿಸಲಾಗುವುದು

1585 (1833) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ (ಬ್ರಹ್ಮಾವರ) – ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2006–07ನೇ ಸಾಲಿನಿಂದ ಗ್ರಾಮ ಪಂಚಾಯಿತಿಗಳಿಗೆ ಉಡುಪಿ ತಾಲ್ಲೂಕಿನಲ್ಲಿ ಯಾವ ಯಾವ ಯೋಜನೆಯಡಿ ಎಷ್ಟೆಷ್ಟು ಅನುದಾನವನ್ನು ನೀಡಲಾಗಿದೆ (ಗ್ರಾಮ ಪಂಚಾಯಿತಿವಾರು ವಿವರ ಒದಗಿಸುವುದು)?

ಶ್ರೀ ಸಿ ಎಂ ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ